1	2	3	4	5	6
5.	Kallambella	69.81	6.	Jagalur	57.50
6.	Koratagere	54.77	7.	Mayakonda	42.59
7.	Kunigal	36.20	8.	Hodogalli	40.00
8.	Madhugiri	27.00		**District: Shimoga**	
9.	Pavagada	51.85	1.	Bhadravathi	12.00
10.	Sira	55.60	2.	Holehonnur	68.41
11.	Tiptur	39.75	3.	Hosanagara	56.97
12.	Tumkur	3.15	4.	Sagara	49.50
13.	Turuvekere	63.22	5.	Shikaripura	52.45
			6.	Shimoga	11.65
			7.	Saraha	21.80
			8.	Thirthahalli	57.50

ಕಂಪ್ಯೂಟರ್ ಪಹಣಿ ಪತ್ರಗಳ ಕಂಪ್ಯೂಟರ್ ಮೇಂಟೆನೆನ್ಸ್

206 (308) ಶ್ರೀ ಗೋಪಾಲ ಪೂಜಾರಿ ಕೆ (ಬೈಂದೂರು) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತಾಲ್ಲೂಕು ಕಛೇರಿಯ ಕಂಪ್ಯೂಟರ್ ಮೇಂಟೆನೆನ್ಸ್ ರೂಪಾಯಿ 8,000 ನಗದು ನೀಡುತ್ತಿರುವುದು ನಿಜವೇ?

ಆ) ಈ 8,000 ರೂಪಾಯಿ ಎಲ್ಲಾ ತಾಲ್ಲೂಕಿಗೆ ಸರಿ ಸಮನಾಗಿ ನೀಡುತ್ತಿರುವುದು ಸರಿಯೇ?

ಇ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು 10,000 ಪಹಣಿ ಪತ್ರಿಕೆ ಇದ್ದು, ತಾಲ್ಲೂಕು ಒಂದರ ರೂ. 8,000 ನೀಡುತ್ತಿದ್ದು, ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನಲ್ಲಿ 3,07,000 ಪಹಣಿ ಪತ್ರಿಕೆ ಇದ್ದು ಇಲ್ಲಿಯೂ ಕೂಡ ಮೇಂಟೆನೆನ್ಸ್‌ಗೆ 8,000 ರೂಪಾಯಿ ನೀಡುತ್ತಿದ್ದು, ಇದೂ ಸಾಕಾಗುವುದೇ?

ಈ) ಹೆಚ್ಚು ಪಹಣಿಪತ್ರಿಕೆ ಇರುವ ತಾಲ್ಲೂಕಿಗೆ ಹೆಚ್ಚಿನ ಹಣ ಬಿಡುಗಡೆ ಮಾಡಬಹುದೇ?

ಉ) ಒಂದು ಪಹಣಿ ಪತ್ರಿಕೆಗೆ ರೂ. 15 ಶುಲ್ಕ ವಿಧಿಸಿದ್ದು, ಇದು ನೇರವಾಗಿ ಸರ್ಕಾರಕ್ಕೆ ಪಾವತಿಯಾಗುವುದು ನಿಜವೇ? ಇದರ ಸ್ವಲ್ಪ ಭಾಗವನ್ನು ಮೇಂಟೆನೆನ್ಸ್‌ಗೆ ಸಂಬಂಧಿಸಿದ ಅಧಿಕಾರಿಗಳಿಗೆ ನೀಡಬಹುದಲ್ಲವೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಇಲ್ಲ. ದಿನನಿತ್ಯದ ವೆಚ್ಚಗಳಿಗಾಗಿ 25,000 ರೂ. ಗಳ ಮೊತ್ತವನ್ನು ಪ್ರತಿ ತಾಲ್ಲೂಕಿಗೆ ನೀಡಲಾಗುತ್ತಿದೆ.

ಆ) ಉದ್ಭವಿಸುವುದಿಲ್ಲ.

ಇ) ಭೂಮಿ ಯೋಜನೆಗೆ ಸಂಬಂಧಿಸಿದ ವೆಚ್ಚಗಳನ್ನು ಭರಿಸಲು ಪ್ರತಿ ತಾಲ್ಲೂಕಿಗೆ 25,000 ರೂ.ಗಳನ್ನು ನೀಡಲಾಗುತ್ತಿದೆ. ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಸಂಗ್ರಹವಾಗುತ್ತಿರುವ ಯೂಸರ್ ಚಾರ್ಜ್‌ಗಳ ಮೊತ್ತವನ್ನು ಜಿಲ್ಲಾಧಿಕಾರಿಗಳೇ ಉಪಯೋಗಿಸಿಕೊಳ್ಳುವ ಪ್ರಸ್ತಾವನೆಯು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಭೂಮಿ ಕೇಂದ್ರಗಳಿಗೆ ಪೆಸಿಲಿಟಿ ಮ್ಯಾನೇಜರ್‌ಗಳನ್ನು ಒದಗಿಸುವುದನ್ನು ಉದ್ದೇಶಿಸಲಾಗಿದೆ.

ಈ) ಇನ್ನು ಮುಂದೆ ವಾಸ್ತವಿಕ ವೆಚ್ಚಗಳನ್ನು ಆಧರಿಸಿ ಜಿಲ್ಲಾಧಿಕಾರಿಗಳು ತಹಶೀಲ್ದಾರರಿಗೆ ದಿನನಿತ್ಯ ವೆಚ್ಚಗಳಿಗಾಗಿ ಅನುದಾನ ಬಿಡುಗಡೆ ಮಾಡಲಿದ್ದಾರೆ.

ಉ) ಹೌದು. ಭವಿಷ್ಯದಲ್ಲಿ ಜಿಲ್ಲಾಧಿಕಾರಿಗಳು ತಮ್ಮ ಮಟ್ಟದಲ್ಲಿ ಸಂಗ್ರಹವಾದ ಯೂಸರ್ ಚಾರ್ಜ್ ಮೊತ್ತವನ್ನು ಉಪಯೋಗಿಸಿಕೊಳ್ಳಲು ಯೋಜಿಸಲಾಗಿದೆ.

ಮೈಸೂರು ನಗರದ ಚಾಮುಂಡೇಶ್ವರಿ ಬೆಟ್ಟದ ಸುತ್ತಮುತ್ತಲಿನ ಭೂಮಿಯನ್ನು ಕಬಳಿಸಿದ ಬಗ್ಗೆ

208 (649) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ನಗರದ ಚಾಮುಂಡೇಶ್ವರಿ ಬೆಟ್ಟದ ಸುತ್ತಮುತ್ತಲಿನ ಭೂಮಿಯನ್ನು ಕಬಳಿಸಿದ ಬಗ್ಗೆ ಹಿಂದೆ ಜಿಲ್ಲಾಧಿಕಾರಿಯವರು ತನಿಖೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಿರುವ ವಿಚಾರ ನಿಜವಲ್ಲವೆ?

ಆ) ಹಾಗಿದ್ದಲ್ಲಿ, ಸದರಿ ಭೂ ಕಬಳಿಕೆಯಲ್ಲಿ ಭಾಗಿಯಾದವರ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು:

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಚಾಮುಂಡಿಬೆಟ್ಟದ ಆರಣ್ಯ ಪ್ರದೇಶದಲ್ಲಿ ಅರಣ್ಯ ಅಭಿವೃದ್ಧಿ ಯೋಜನೆ

209 (653) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರಿನ ಚಾಮುಂಡೇಶ್ವರಿ ಮತ ಕ್ಷೇತ್ರದಲ್ಲಿ ಬರುವ ಚಾಮುಂಡಿ ಬೆಟ್ಟದ ಅರಣ್ಯ ಪ್ರದೇಶದಲ್ಲಿ ವಿದೇಶಗಳಿಂದ ಧನ ಸಹಾಯ ಪಡೆದು ಅರಣ್ಯ ಅಭಿವೃದ್ಧಿ ಯೋಜನೆಯನ್ನು ಕೈಗೊಳ್ಳಲಾಗಿದೆಯೇ?